## 1ನೆ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ . ದಂ.ಯವರ ನ್ಯಾಯಾಲಯ, ಕುಂದಾಪುರ

**ಸಿ.ಸಿ ಸಂಖ್ಯೆಃ 1783-2013**

ಪಿರ್ಯಾದಿದಾರರು ಃ ಸರ್ಕಾರದ ಪರವಾಗಿ ಕುಂದಾಪುರ ಸಂಚಾರ ಠಾಣಾ ಪೊಲೀಸರು

-ವಿರುದ್ಧ-

ಆರೋಪಿ ಃ 1 ಪ್ರಹ್ಲಾದ್ ಪೂಜಾರಿ (Splitup)
2.ಪ್ರಶಾಂತ ಶೇರಿಗಾರ (Splitup)
3. ಅಭಿಷೇಕ್ ಶೆಟ್ಟಿಗಾರ (Splitup)
4. ಶ್ರೀಮತಿ ಪ್ರೇಮಾ

**ಮುಂದುವರೆದ ಅಪರಾಧಿಕ ಪ್ರಕ್ರಿಯಾ ಸಂಹಿತೆ ಕಲಂ 313 ರಡಿಯಲ್ಲಿ ಆರೋಪಿಯ ಹೇಳಿಕೆ**

ಪ್ರಶ್ನೆಃ 1. ಅಭಿಯೋಜನೆ ಪರ ವಿಚಾರಣೆ ಮಾಡಲಾದ ಸಾಕ್ಷಿದಾರರ ಹೇಳಿಕೆ ಕೇಳಿದ್ದೀರಾ?
ಉತ್ತರಃ 4.

ಪ್ರಶ್ನೆಃ 2. ಪ್ರಾಸಾ 1: ಸುಮಂಗಲ ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ದಿ. 27.11.2012 ರಂದು ರಾತ್ರಿ 11.30 ಗಂಟೆ ಸಮಯಕ್ಕೆ ತಾನು ಮತ್ತು ತನ್ನ ತಮ್ಮ ಕೊಟೇಶ್ವರದ ಕಾಗೇರಿಯಲ್ಲಿ ದೇವರ ಉತ್ಸವದ ಕಟ್ಟೆ ಪೂಜೆ ಮುಗಿಸಿ ಬರುತ್ತಿದ್ದಾಗ ನ್ಯಾಯಾಲಯದ ಮುಂದೆ ಇರುವ 1 ರಿಂದ 3 ನೇ ಆರೋಪಿತರು ತನ್ನನ್ನು ಹಿಂಬಾಲಿಸಿಕೊಂಡು ಬಂದರು. ಎದುರುಗಡೆಯಿಂದ ಸಹ ತುಂಬಾ ಜನ ಬರುತ್ತಿದ್ದ ಕಾರಣ ತಾನು ಸದ್ರಿ ವಿಷಯವನ್ನು ಗಂಭೀರವಾಗಿ ಪರಿಗಣಿಸಿರುವುದಿಲ್ಲ. ತಾನು ಮತ್ತು ತನ್ನ ತಮ್ಮಂದಿರಾದ ರವೀಂದ್ರ ಮತ್ತು ರಾಘವೇಂದ್ರ ಒಟ್ಟಿಗೆ ದೇವರ ಆರತಿ ತೆಗೆದುಕೊಂಡು ಬರುತ್ತಿದ್ದೇವು ಎಂದು ನುಡಿದಿರುತ್ತಾರೆ ಇದಕ್ಕೆ ನಿಮ್ಮ ಹೇಳಿಕೆ ಏನು?
ಉತ್ತರಃ 4.

ಪ್ರಶ್ನೆಃ 3. ಪ್ರಾಸಾ 1: ಸುಮಂಗಲ ರವರು ಮುಂದುವರೆದು ಆರೋಪಿ ಪ್ರಹ್ಲಾದ ಮತ್ತು ಅಭಿಶೇಕ ಎನ್ನುವವರನ್ನು ಸಾಕ್ಷಿಯು ತೋರಿಸಿ ಅವರಿಬ್ಬರೂ ತನ್ನನ್ನು ದಾಟಿ ಮುಂದೆ ಹೋದರು. ಆರೋಪಿ ಅಭಿಷೇಕ ತನ್ನ ಹಿಂದುಗಡೆಯಿಂದ ಬಂದು ತನ್ನ ಕುತ್ತಿಗೆಯಲ್ಲಿದ್ದ ಮಾಂಗಲ್ಯ ಸರ ಮತ್ತು ಕೆಂಪು ಹವಳದ ಸರವನು ಕಿತ್ತುಕೊಂಡು ಬೀಜೋತ್ಪಾದನಾ ಕೇಂದ್ರ ಮಾರ್ಗವಾಗಿ ಸರಿಗೆ ಬೇಲಿ ಹಾರಿ ಸೀಟ್ ಪಾರ್ಮ್ ನಿಂದ ಓಡಿ ಹೋದರು. ತನ್ನ ಚಿನ್ನಾಭರವು **9-10** ಪವನ್ ಆಗಿದ್ದು ಅವುಗಳ ಅಂದಾಜು ಮೌಲ್ಯ ಸುಮಾರು **2** ಲಕ್ಷ ರೂ. ಆಗಬಹುದು ಎಂದು ನುಡಿದಿರುತ್ತಾರೆ ಇದಕ್ಕೆ ನಿಮ್ಮ ಹೇಳಿಕೆ ಏನು?
ಉತ್ತರಃ 4.

ಪ್ರಶ್ನೆಃ 4. ಪ್ರಾಸಾ 1: ಸುಮಂಗಲ ರವರು ಮುಂದುವರೆದು ನಂತರ ತನ್ನ ತಮ್ಮ ರವೀಂದ್ರ ಸದ್ರಿ ವ್ಯಕ್ತಿಯನ್ನು ಹಿಂಬಾಲಿಕೊಂಡು ಹೋದರು ಆದರೆ ಅವರು ಸಿಗಲಿಲ್ಲ. ನಂತರ ದಿ.28.11.2012 ರಂದು ಬೆಳಿಗ್ಗೆ 10.00 ಗಂಟೆಗೆ ಕುಂದಾಪುರ ಪೊಲೀಸ್ ಠಾಣೆಗೆ ಹೋಗಿ ಪಿರ್ಯಾದಿಯನ್ನು ನೀಡಿದ್ದು. ಪಿರ್ಯಾದಿಯನ್ನು ನಿಪಿ1 ಎಂದು ಸಾಕ್ಷಿಯ ಸಹಿಯನ್ನು ನಿಪಿ1(ಎ) ಎಂದು ಗುರುತಿಸಲಾಯಿತು. ತನ್ನ ಸರ ಮತ್ತು ಲಕ್ಷ್ಮೀ ಪೆಂಡೆಂಟನ್ನು ತನ್ನ ಕುತ್ತಿಗೆಯಿಂದ ಸುಲಿಗೆ ಮಾಡಿಕೊಂಡು ಹೋದ ವ್ಯಕ್ತಿಯು 3 ನೇ ಆರೋಪಿ ಅಭಿಶೇಕ್ ಆಗಿರುತ್ತಾರೆ ಎಂದು ನುಡಿದಿರುತ್ತಾರೆ ಇದಕ್ಕೆ ನಿಮ್ಮ ಹೇಳಿಕೆ ಏನು?
ಉತ್ತರಃ 4.

ಪ್ರಶ್ನೆಃ 5. ಪ್ರಾಸಾ 1: ಸುಮಂಗಲ ರವರು ಮುಂದುವರೆದು ನಂತರ ಪೊಲೀಸರು ಪಿರ್ಯಾದಿ ಕೊಟ್ಟ ಮಧ್ಯಾಹ್ನ 4.00 ರಿಂದ 5.00 ಗಂಟೆ ಹೊತ್ತಿಗೆ ಪೊಲೀಸರು ತಕ್ಷೀರು ಸ್ಥಳಕ್ಕೆ ಬಂದು ಸ್ಥಳವನ್ನು ತಾನು ತೋರಿಸಿಕೊಟ್ಟಂತೆ ಪೊಲೀಸರು ಸ್ಥಳವನ್ನು ಪರಿಶೀಲಿಸಿ ಪಂಚನಾಮೆಯನ್ನು ಮಾಡಿದ್ದು. ಆ ಸಮಯದಲ್ಲಿ ಸುರೇಶ ಮತ್ತು ಮೋಹನರಾಜ ಸಹ ತನ್ನ ಜೊತೆ ಇದ್ದರು. ಪಂಚನಾಮೆಯನ್ನು ನಿ.ಪಿ2 ಎಂದು ಸಾಕ್ಷಿಯ ಸಹಿಯನ್ನು ನಿಪಿ2(ಎ) ಎಂದು ಗುರುತಿಸಲಾಯಿತು. ಪೊಲೀಸರು ನಿಪಿ3 ರಂತೆ ನಕಾಶೆಯನ್ನು ಸಹ ತಯಾರಿಸಿದ್ದು. ಮಹಜರನುನ 4.00 ರಿಂದ 5.00 ಗಂಟೆಯವರೆಗೆ ಮಾಡಿರುತ್ತಾರೆ ಎಂದು ನುಡಿದಿರುತ್ತಾರೆ ಇದಕ್ಕೆ ನಿಮ್ಮ ಹೇಳಿಕೆ ಏನು?

ಉತ್ತರಃ 4.

ಪ್ರಶ್ನೆಃ 6. ಪ್ರಾಸಾ 1: ಸುಮಂಗಲ ರವರು ಮುಂದುವರೆದು ಜನವರಿ 2013 ನೇ ಸಾಲಿನಲ್ಲಿ ಪೊಲೀಸರು ತನಗೆ ಪುನಃ ಠಾಣೆಗೆ ಕರೆಸಿ 1 ನೇ ಆರೋಪಿ ಪ್ರಶಾಂತನನ್ನು ತನಗೆ ತೋರಿಸಿದ್ದು. ಆಗ ತಾನು ಅವರನ್ನು ನೋಡಿ ತನಗೆ ಆ ದಿನ ಹಿಂಬಾಲಿಸಿಕೊಂಡು ಬಂದ ವ್ಯಕ್ತಿ ಇವರೇ ಎಂದು ಗುರುತಿಸಿದ್ದು. ನಂತರ ಕಳ್ಳತನವಾದ 3 ತಿಂಗಳ ನಂತರ ತನಗೆ ಪೊಲೀಸರು ಮತ್ತೊಮ್ಮೆ ಠಾಣೆಗೆ ಕರೆಸಿದ್ದು ಆರೋಪಿ ಪ್ರಹ್ಲಾದ ಮತ್ತು ಅಭಿಶೇಕ್‌ರವರನ್ನು ತೋರಿಸಿದ್ದು ಅವರನ್ನು ಕೂಡ ತಾನು ಗುರುತಿಸಿದ್ದು, ಆ ಸಮಯದಲ್ಲಿ ಪೊಲೀಸರು ತನ್ನ ಕಳ್ಳತನವಾದ ಮಾಂಗಲ್ಯ ಸರ, ಹವಳದ ಸರ ತುಂಡಾಗಿದ್ದು ತಾನು ಸರಿಗೆ ಚಿನ್ನದ ಗುಂಡು, ಲಕ್ಷ್ಮಿ ಪೆಂಡೆಂಟ್ ಮತ್ತು ಹವಳದ ಸರವನ್ನು ಠಾಣೆಯಲ್ಲಿ ನೋಡಿ ಗುರುತಿಸಿರುತ್ತೇನೆ ಎಂದು ನುಡಿದಿರುತ್ತಾರೆ ಇದಕ್ಕೆ ನಿಮ್ಮ ಹೇಳಿಕೆ ಏನು?

ಉತ್ತರಃ 4.

ಪ್ರಶ್ನೆಃ 7. ಪ್ರಾಸಾ 1: ಸುಮಂಗಲ ರವರು ಮುಂದುವರೆದು ಆರೋಪಿ ಅಭಿಷೇಕ್ ತನ್ನ ಕುತ್ತಿಗೆಯಿಂದ ಕರಿಮಣಿ ಸರ ಮತ್ತು ಹವಳದ ಸರ ಎಳೆಯುವಾಗ ತನ್ನ ಕುತ್ತಿಗೆಗೆ ಸ್ವಲ್ಪ ಗಾಯವಾಗಿತ್ತು. ಆ ಬಗ್ಗೆ ತಾನು ಕುಂದಾಪುರ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿರುತ್ತೇನೆ. ತಾನು ಪೊಲೀಸ ಠಾಣೆಗೆ ಮತ್ತೇ ಹೋಗಿದ್ದಾಗ ನ್ಯಾಯಾಲಯದ ಮುಂದೆ ಇರುವ 4 ನೇ ಆರೋಪಿ ಪ್ರೇಮಾರವರು ತನ್ನ ಆಭರಣಗಳನ್ನು ಒಂದು ಸೊಸೈಟಿನಲ್ಲಿ ಅಡವಿಟ್ಟ ಬಗ್ಗೆ ಪೊಲೀಸರು ತನಗೆ ತಿಳಿಸಿರುತ್ತಾರೆ. ಈ ಎಲ್ಲಾ ವಿಷಯಗಳ ಬಗ್ಗೆ ತಾನು ಪೊಲೀಸರಿಗೆ ಮರುಹೇಳಿಕೆ ನೀಡಿರುತ್ತೇನೆ ಎಂದು ನುಡಿದಿರುತ್ತಾರೆ ಇದಕ್ಕೆ ನಿಮ್ಮ ಹೇಳಿಕೆ ಏನು?

ಉತ್ತರಃ 4.

ಪ್ರಶ್ನೆಃ 8. ಪ್ರಾಸಾ 1: ಸುಮಂಗಲ ರವರು ಮುಂದುವರೆದು ಸುಮಾರು 2-3 ತಿಂಗಳ ನಂತರ ತಾನು ಮಾನ್ಯ ನ್ಯಾಯಾಲಯದ ಆದೇಶದಂತೆ ತನ್ನ ಮಾಂಗಲ್ಯ ಸರ ಮುತ್ತ ಹವಳದ ಸರವನ್ನು ತನ್ನ ಮದ್ಯಂತರ ವಶಕ್ಕೆ ಪಡೆದುಕೊಂಡಿದ್ದು. ಆಗ ತಾನು ಪೋಲಿಸರಿಗೆ ಚಿನ್ನಾಭರಗಳನುನ ಸ್ವೀಕರಿಸಿದ ಬಗ್ಗೆ 2 ಸ್ವೀಕೃತಿಯನ್ನು ನೀಡಿದ್ದು. 2 ಸ್ವಿಕೃತಿಯನ್ನು ಈ ನೋಡುತ್ತಿದ್ದು, ಅವುಗಳನ್ನು ನಿಪಿ4 ಮತ್ತು 5 ಎಂದು ಗುರುತಿಸಲಾಯಿತು. ಈಗ ತಾನು ಕರಿಮಣಿ ಸರ ಸರಿಗೆ ಮತ್ತು ಗುಂಡನ್ನು ರಿಪೇರಿ ಮಾಡಿ ಧರಿಸಿದ್ದು. ಸರಿಗೆಯನ್ನೊಳಗೊಂಡ ಕರಿಮಣಿ ಸರವನುನ ಹಾಜರುಪಡಿಸಿದ್ದು ಅದನುನ ಮು.ಮಾ1 ಎಂದು ಅದೇ ರೀತಿ ಲಕ್ಷ್ಮೀ ಪೆಂಡೆಂಟ್ ಒಳಗೊಂಡ ಹವಳದ ಸರವನ್ನು ತಾನು ರೀಪೇರಿ ಮಾಡಿ ಈ ದಿನ ತಂದಿದ್ದು ಅದನ್ನು ಈ ನೋಡುತ್ತಿದ್ದು ಅದನ್ನು ಮು.ಮಾ.2 ಎಂದು ಗುರುತಿಸಲಾಯಿತು. ಛಾಯಾಚಿತ್ರವನ್ನು ನಿಪಿ6 ಮತ್ತು ನಿಪಿ7 ಎಂದು ಗುರುತಿಸಲಾಯಿತು. ಸಿಡಿ ಯನ್ನು ಮುಮಾ3 ಎಂದುಗುರುತಿಸಲಾಯಿತು. ನ್ಯಾಯಾಲಯದ ಮುಂದೆ ಇರುವ ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ ಎಂದು ನುಡಿದಿರುತ್ತಾರೆ ಇದಕ್ಕೆ ನಿಮ್ಮ ಹೇಳಿಕೆ ಏನು?

ಉತ್ತರಃ 4.

ಪ್ರಶ್ನೆಃ 9. ಪ್ರಾಸಾ 2: ರವೀಂದ್ರ ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ದಿ. 27.11.2012 ರಂದು ರಾತ್ರಿ 12.15 ಗಂಟೆಗೆ ತಾನು ಮತ್ತು ಪ್ರಾಸಾ1 ರವರು ಕೊಟೇಶ್ವರದ ಕಾಗೇರಿಯಲ್ಲಿ ದೇವರ ಉತ್ಸವದ ಕಟ್ಟೇ ಪೂಜೆ ಮುಗಿಸಿ ಬರುತ್ತಿದ್ದಾಗ ಮಂಜುನಾಥ ಪೂಜಾರಿಯವರ ಮನೆಯ ಓಣಿಯ ಹತ್ತಿರ ಬರುತ್ತಿದ್ದಾಗ ತಾನು ಮುಂದೆ ಇದ್ದು ಪ್ರಾಸಾ1 ತನ್ನ ಹಿಂದುಗಡೆ ಇದ್ದರು. ಪ್ರಾಸಾ1 ರವರ ಹಿಂದುಗಡೆ ಸ್ವಲ್ಪ ದೂರದಲ್ಲಿ ತನ್ನ ಅಣ್ಣ ಚಾಸಾ3 ಇದ್ದರು. ಆ ಸಮಯದಲ್ಲಿ ಒಂದಿಬ್ಬರು ಎದುರುನಿಂದ ಬರುತ್ತಿದ್ದದು ಕಂಡುಬಂದಿದ್ದು ಒಬ್ಬ ವ್ಯಕ್ತಿ ಎದುರಿನಿಂದ ತನ್ನನ್ನು ದಾಟಿ ಹೋದ ಎಂದು ನುಡಿದಿರುತ್ತಾರೆ ಇದಕ್ಕೆ ನಿಮ್ಮ ಹೇಳಿಕೆ ಏನು?

ಉತ್ತರಃ 4.

ಪ್ರಶ್ನೆಃ 10. ಪ್ರಾಸಾ 2: ರವೀಂದ್ರ ರವರು ಮುಂದುವರೆದು ಅಷ್ಟರಲ್ಲಿ ತನ್ನ ಅಕ್ಕ ಕಳ್ಳ ಕಳ್ಳ ತನ್ನ ಚಿನ್ನ ತೆಗೆದುಕೊಂಡು ಹೋದ ಎಂದು ಕೂಗಿದಳು. ತಾನು ನೋಡಿದಾಗ ನ್ಯಾಯಾಲಯದ ಮುಂದೆ ಇರುವ ಪ್ರಹ್ಲಾದ ಎನ್ನುವ ಆರೋಪಿ ಪಕ್ಕದಲ್ಲಿರುವ ಕೃಷಿ ಇಲಾಖೆಯ ಬೇಲಿ ದಾಟಿ ಓಡಿ ಹೋದ, ತಾನು ತುಂಬಾ ದೂರ ಅಟ್ಟಿಸಿಕೊಂಡು ಹೋದೆ ಆದರೆ ಕಾಡಿನಲ್ಲಿ ಆತ ತಪ್ಪಿಸಿಕೊಂಡು ನಂತರ ಊರಿನವರೆಲ್ಲಾ ಬಂದರು ಮತ್ತು ಪೊಲೀಸರು ಸಹ ಬಂದು ಹುಡುಕಿದರೂ ಸಹ ಸಿಗಲಿಲ್ಲ. ತನ್ನ

ಅಕ್ಕನ ಕರಿಮಣಿ ಸರ ಮತ್ತು ಹವಳದ ಚೈನನ್ನು ಸದ್ರಿ ವ್ಯಕ್ತಿ ಕಸಿದುಕೊಂಡು ಹೋಗಿದ್ದ. ಸದ್ರಿ ಅಭರಣಗಳ ಮೌಲ್ಯ ಸುಮಾರು 2 ವರೆ ಲಕ್ಷ ರೂ ಆಗಬಹುದು. ತಿಂಗಳು ಬೆಳಕಿನ ಸಹಾಯದಿಂದ ತಾನು ಸದ್ರಿ ವ್ಯಕ್ತಿಯನ್ನು ನೋಡಿದ್ದೆ. ಈ ಬಗೆಗೆ ಪೊಲೀಸರು ತನ್ನ ವಿಚಾರಣೆ ಮಾಡಿ ಹೇಳಿಕೆಯನ್ನು ಪಡೆದುಕೊಂಡಿರುತ್ತಾರೆ ಎಂದು ನುಡಿದಿರುತ್ತಾರೆ ಇದಕ್ಕೆ ನಿಮ್ಮ ಹೇಳಿಕೆ ಏನು?

ಉತ್ತರಃ 4.

ಪ್ರಶ್ನೆಃ 11. ಪ್ರಾಸಾ 2: ರವೀಂದ್ರ ರವರು ಮುಂದುವರೆದು ಆರೋಪಿಯನ್ನು ನ್ಯಾಯಾಲಯುದ ಮುಂದೆ ಗುರುತಿಸಿರುತ್ತಾರೆ. ಉಳಿದ 2 ರಿಂದ 4 ನೇ ಆರೋಪಿತರು ಕಟ್ಟೆ ಪೂಜಾ ಸಮಯದಲ್ಲಿ ಅಲ್ಲಿ ಇದ್ದು ಅವರು ತಮ್ಮ ಊರಿನವರು ಆಗಿರಲಿಲ್ಲ. ಒಂದು ತಿಂಗಳ ನಂತರ ಪೊಲೀಸರು ತನ್ನನ್ನು ಠಾಣೆಗೆ ಕರೆಸಿದ್ದರು. ಆರೋಪಿತರನ್ನು ತನಗೆ ತೋರಿಸಿದ್ದರು ತಾನು ಅವರನ್ನು ಗುರುತು ಹಿಡಿದೆ. ತನ್ನ ಅಕ್ಕನ ಅಭರಣಗಳನ್ನು ಕಸಿದುಕೊಂಡು ಹೋಗಿದ್ದು ಮತ್ತು 1 ನೇ ಆರೋಪಿಯನ್ನು ತಾನು ಹಿಂಬಾಲಿಸಿಕೊಂಡು ಹೋದ ಬಗ್ಗೆ ಮರುಹೇಳಿಕೆಯನ್ನು ನೀಡಿದ್ದು. ಆರೋಪಿತರನ್ನು ತೋರಿಸಿದ ನಂತರ ತನಗೆ ತನ್ನ ಅಕ್ಕನ ಆಭರಣಗಳನ್ನು ತೋರಿಸಿದ್ದರು . ತಾನು ಸದ್ರಿ ಆಭರಣಗಳನ್ನು ಠಾಣೆಯಲ್ಲಿ ಗುರುತಿಸಿರುತ್ತೇನೆ ಎಂದು ನುಡಿದಿರುತ್ತಾರೆ ಇದಕ್ಕೆ ನಿಮ್ಮ ಹೇಳಿಕೆ ಏನು?

ಉತ್ತರಃ 4.

ಪ್ರಶ್ನೆಃ 12. ಪ್ರಾಸಾ 2: ರವೀಂದ್ರ ರವರು ಮುಂದುವರೆದು ಚಾಸಾ1 ರವರು ಹಾಜರುಪಡಿಸಿದ ಒಂದು ಸರ ಮತ್ತು ಕರಿಮಣಿ ಸರವನ್ನು ಮು.ಮಾ1 ಮತ್ತು 2 ಎಂದು ಗುರುತಿಸಿದ್ದು. ಕಳ್ಳತನ ಆದ ಒಂದು ತಿಂಗಳ ನಂತರ ಪೊಲೀಸರು ತಮ್ಮನ್ನು ಪೋಲಿಸ್ ಠಾಣೆಗೆ ಕರೆಸಿ ತೋರಿಸಿದ ವ್ಯಕ್ತಿ ನ್ಯಾಯಾಲಯದ ಮುಂದೆ ಇದ್ದು ಆತನ ಹೆಸರು ಪ್ರಶಾಂತ ಆಗಿದ್ದು. ಪೊಲೀಸರು ತನ್ನಿಂದ ಆರೋಪಿತನನ್ನು ಗುರುತಿಸಿದ ಬಗ್ಗೆ ಮತ್ತು ಚಿನ್ನಾಭರಣಗಳನ್ನು ಸಿಕ್ಕಿರುವ ಬಗ್ಗೆ ಠಾಣೆಯಲ್ಲಿ ತಾನು ಅವುಗಳನ್ನು ಗುರುತಿಸಿದ ಬಗ್ಗೆ ಮರು ಹೇಳಿಕೆಯನ್ನು ಕೊಟ್ಟಿರುತ್ತೇನೆ ಎಂದು ನುಡಿದಿರುತ್ತಾರೆ ಇದಕ್ಕೆ ನಿಮ್ಮ ಹೇಳಿಕೆ ಏನು?

ಉತ್ತರಃ 4.

ಪ್ರಶ್ನೆಃ 13. ಪ್ರಾಸಾ 3: ರಾಘವೇಂದ್ರ ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ದಿ. 27.11.2012 ರಂದು ರಾತ್ರಿ 12.00 ಗಂಟೆಗೆ ತಮ್ಮ ಮನೆಯ ಅಶೋಕ ಕಟ್ಟೆ ಹತ್ತಿರ ತಾನು ಮತ್ತು ಚಾಸಾ1 ಮತ್ತು 2 ನೇ ರವರು ದೇವರದ ಪೂಜೆ ಮುಗಿಸಿ ಮನೆಗೆ ಬರುತ್ತಿದ್ದಾಗ ಚಾಸಾ.1 ರವರ ಕೈಯಲ್ಲಿ ದೀಪದ ಆರತಿ ಇದ್ದು, ತಾವು ಮನೆಗೆ ಹೋಗುತ್ತಿರುವಾಗ ತಾನು ಸ್ವಲ್ಪ ಹಿಂದೆ ಇದ್ದು, ಚಾಸಾ1 ಮತ್ತು 2 ರವರು ಮುಂದೆ ಇದ್ದು, ಒಬ್ಬ ವ್ಯಕ್ತಿ ಚಾಸಾ1 ರವರ ಕುತ್ತಿಗೆಯಿಂದ ಮಾಂಗಲ್ಯದ ಸರ ಮತ್ತು ಒದು ಹವಳದ ಸರವನ್ನು ಕಿತ್ತುಕೊಂಡು ಓಡಿ ಹೋಗಿದ್ದು. ಆಗ ಚಾಸಾ1 ರವರು ಬೊಬ್ಬೆ ಹೊಡೆದಾಗ ಚಾಸಾ2 ರವರು ಆತನನ್ನು ಬೆನ್ನಟ್ಟಿಕೊಂಡು ಓಡಿ ಹೋಗಿದ್ದು. ಆದರೆ ಆತ ಸಿಕ್ಕಿರುವುದಿಲ್ಲ. ನಂತರ ಚಾಸಾ1 ರವರು ಪೊಲೀಸ್ ಠಾಣೆಗೆ ಹೋಗಿ ದೂರನ್ನು ಕೊಟ್ಟಿರುತ್ತಾರೆ ಎಂದು ನುಡಿದಿರುತ್ತಾರೆ ಇದಕ್ಕೆ ನಿಮ್ಮ ಹೇಳಿಕೆ ಏನು?

ಉತ್ತರಃ 4.

ಪ್ರಶ್ನೆಃ 14. ಪ್ರಾಸಾ 3: ರಾಘವೇಂದ್ರ ರವರು ಮುಂದುವರೆದು ಸ್ವಲ್ಪ ದಿನಗಳ ನಂತರ ಪೊಲೀಸರು ತಮ್ಮನ್ನು ಠಾಣೆಗೆ ಕರೆಸಿ ಆರೋಪಿ ಪ್ರಶಾಂತ ಮತ್ತು ಪ್ರಹ್ಲಾದನನ್ನು ಪೊಲೀಸ್ ಠಾಣೆಯಲ್ಲಿ ತಮಗೆ ತೋರಿಸಿ ತನ್ನ ಅಕ್ಕನ ಕುತ್ತಿಗೆಯಿಂದ ಕಸಿದುಕೊಂಡು ಹೋದ ಕರಿಮಣಿ ಸರ ಮತ್ತು ಹವಳದ ಸರವನ್ನು ಕೂಡ ತೋರಿಸಿದ್ದು. ಅದನ್ನು ತಾವು ಗುರುತಿಸಿದ್ದು. ಸದ್ರಿ ಚಿನ್ನವನ್ನು ಅಲ್ಲಿದ್ದ ಆರೋಪಿತರೆ ಕಿತ್ತುಕೊಂಡು ಹೋಗಿದ್ದು ಎಂದು ಪೊಲೀಸರು ಹೇಳಿದ್ದ. ಸದ್ರಿ ಚಿನ್ನವನುನ ಮುತ್ತೂಟ್ ಫೈನಾನ್ಸ ಕಂಪೆನಿಯಲ್ಲಿ ಅಡವಿಟ್ಟಿರುವ ಬಗ್ಗೆ ತಿಳಿಸಿದ್ದು. ನ್ಯಾಯಾಲಯದ ಮುಂದೆ ಇರುವ ಆರೋಪಿತರನುನ ಸಾಕ್ಷಿ ಗುರುತಿಸಿದ್ದು. 1 ನೇ ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ ಎಂದು ನುಡಿದಿರುತ್ತಾರೆ ಇದಕ್ಕೆ ನಿಮ್ಮ ಹೇಳಿಕೆ ಏನು?

ಉತ್ತರಃ 4.

ಪ್ರಶ್ನೆಃ 15. ಪ್ರಾಸಾ 4: ಮೋಹನ್ ರಾವ್ ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ದಿ. 28.11.2012 ರಂದು ಕೋಟೇಶ್ವರ ಕಾಗೇರಿ ಎಂಬಲ್ಲಿ ಮಂಜುನಾಥ ಪೂಜಾರಿಯವರ ಮನೆಯ ಹಿಂದೆ ಚಾಸಾ1 ರವರ ಚಿನ್ನದ ಸರ ಕಳುವಾದ ಬಗ್ಗೆ ಅಲ್ಲಿಗೆ

ಬಂದ ಪೊಲೀಸರು ಸ್ಥಳವನ್ನು ಪರಿಶೀಲಿಸಿ ಸಂಜೆ 4.00 ರಿಂದ 5.00 ಗಂಟೆಯವರೆಗೆ ಪಂಚನಾಮೆಯನ್ನು ನಿ.ಪಿ.2 ಮತ್ತು ನಕಾಶೆಯನ್ನು ನಿ.ಪಿ.3 ರಂತೆ ಮಾಡಿದ್ದು. ಸದ್ರಿ ದಾಖಲೆಗಳಿಗೆ ತಾನು ಸಹಿ ಮಾಡಿದ್ದು ಎಂದು ನುಡಿದಿರುತ್ತಾರೆ ಇದಕ್ಕೆ ನಿಮ್ಮ ಹೇಳಿಕೆ ಏನು?

ಉತ್ತರಃ 4.

ಪ್ರಶ್ನೆಃ 16. ಪ್ರಾಸಾ 5: ಮಂಜುನಾಥ ಪೂಜಾರಿ ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ಚಾಸಾ1 ರವರು ತಮ್ಮ ನೆರೆಮನೆಯವರಾದ ಕಾರಣ ಅವರ ಪರಿಚಯ ಇದೆ. ದಿ. 27.11.2012 ರಂದು ರಾತ್ರಿ 11.00 ಗಂಟೆ ಸಮಯದಲ್ಲ್ ಕಟ್ಟೇದೇವರ ಉತ್ಸವವನ್ನು ನೋಡಲು ಹೋಗಿದ್ದು ಅಲ್ಲಿ ತುಂಬಾ ಜನ ಸೇರಿದ್ದು ತಾವು ಉತ್ಸವವನ್ನು ಮುಗಿದ ಮೇಲೆ ಮಧ್ಯರಾತ್ರಿ ಸುಮಾರು 12.00 ಗಂಟೆ ಸಮಯಕ್ಕೆ ತಮ್ಮ ಮನೆಯ ಹತ್ತಿ ಬೊಬ್ಬೆ ಹಾಕಿದ್ದ ಶಬ್ದ ಕೇಳಿಸಿದ್ದು ಅಲ್ಲಿ ಹೋಗಿ ನೋಡಿದಾಗ ಚಾಸಾ1 ರವರು ತನ್ನ ಕರಿಮಣಿ ಮತ್ತು ಹವಳದ ಸರವನ್ನು ಯಾರೋ ಕಿತ್ತುಕೊಂಡು ಹೋದರು ಎಂದು ಆಳುತ್ತಿದ್ದರು. ಕಟ್ಟೇ ದೇವರ ಉತ್ಸವವನ್ನು ಮುಗಿಸಿಕೊಂಡು ಮನೆಗೆ ವಾಪಾಸು ಹೋಗುತ್ತಿದ್ದಾಗ ತಮ್ಮ ಮನೆಯ ಹಿಂದಿನ ರಸ್ತೆಯಲ್ಲಿ ಆ ಘಟೆ ನಡೆದಿದೆ ಎಂದು ಹೇಳಿದರು. ಸುಲಿಗೆ ಮಾಡಿದ ವ್ಯಕ್ತಿಯನ್ನು ಚಾಸಾ1 ರವರ ತಮ್ಮ ಚಾಸಾ2 ರವರು ಹಿಂಬಾಲಿಸಿಕೊಂಡು ಹೋಗಿದ್ದು ಅವರು ಸಿಕ್ಕಿರುವುದಿಲ್ಲ ಎಂದು ಹೇಳಿದ್ದು. ಸದ್ರಿ ಘಟನೆ ಆದ ಅರ್ಧಗಂಟೆಗೆ ಪೊಲೀಸರು ಸ್ಥಳಕ್ಕೆ ಬಂದು ಘಟನೆಯ ಬಗ್ಗೆ ತನ್ನನ್ನು ವಿಚಾರಿಸಿರುತ್ತಾರೆ ಎಂದು ನುಡಿದಿರುತ್ತಾರೆ ಇದಕ್ಕೆ ನಿಮ್ಮ ಹೇಳಿಕೆ ಏನು?

ಉತ್ತರಃ 4.

ಪ್ರಶ್ನೆಃ 17. ಪ್ರಾಸಾ 7: ಪ್ರತಾಪ ಶೆಟ್ಟಿ ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ದಿ. 09.01.2013 ರಂದು 4 ನೇ ಆರೋಪಿತರು ಈ ಹಿಂದೆ ಆಕೆಯ ಹೆಸರಿನಲ್ಲಿ ಅಡವಿಟ್ಟಿದ್ದ 2 ಎಳೆಯ ಕರಿಮಣಿ ಸರವನ್ನು ಮಧ್ಯಾಹ್ನ 1.30 ಗಂಟೆ ಸಮಯಕ್ಕೆ ಚಾಸಾ29 ರವರು ತಮಂ ಕಚೇರಿಗೆ ಬಂದು ಅದು ಕಳ್ಳತನದ ಮಾಲು ಎಂದು ತಿಳಿಸಿ ತನ್ನ ಹಾಗೂ ಚಾಸಾ11, 12 ರವರು ಹಾಗೂ 4 ನೇ ಆರೋಪಿಯ ಸಮಕ್ಷಮ ಮು.ಮಾ1 ನುನ ಪರಿಶೀಲಿಸಿ ಚಾಸಾ11 ರವರು ತೂಕ ಮಾಡಿ ನೋಡಲಾಗಿ 33.6 ಗ್ರಾಂ ಇದ್ದು ಅದರ ಅಂದಾಜು ಮೌಲ್ಯ 70 ಸಾವಿರ ರೂ. ಆಗಿರುತ್ತದೆ. ಬ್ಯಾಂಕಿನಿಂದ 4 ನೇ ಆರೋಪಿಯು ಚಿನ್ನವನ್ನು ಅಡವಿಟ್ಟ ಬಗ್ಗೆ ದಾಖಲೆಗಳನ್ನು ಪೊಲೀಸರು ಜಪ್ತು ಮಾಡಿರುವುದಿಲ್ಲ. 4 ನೇ ಆರೋಪಿಯು 50 ಸಾವಿನ ರೂ.ಗಳಿಗಾಗಿ ಮು.ಮಾ.1 ನ್ನು ಅಡವಿಟ್ಟಿದ್ದರು. ಅಡವಿಟ್ಟ ಮರುದಿನ ಬಂದು 5 ಸಾವಿನ ರೂ.ವನ್ನು ಮರುಪಾವತಿ ಮಾಡಿದ್ದು. ಆ ಬಗ್ಗೆ ಯಾವುದೇ ದಾಖಲೆಯನ್ನು ಜಪ್ತು ಮಾಡಿರುವುದಿಲ್ಲ. ನಂತರ ಚಾಸಾ29 ರವರು ಕರಿಮಣಿ ಸರವನ್ನು ವಶಕ್ಕೆ ಪಡೆದು ಮಹಜರು ಕ್ರಮ ಜರುಗಿಸಿ ತನ್ನ ಸಹಿಯನ್ನು ಪಡೆದಿದ್ದು. ಸದ್ರಿ ಮಹಜರನುನ ನಿ.ಪಿ.9 ಎಂದು ಸಾಕ್ಷಿಯ ಸಹಿಯನ್ನು ನಿ.ಪಿ.9(ಎ) ಎಂದು ಗುರುತಿಸಲಾಯಿತು. ನಿ.ಪಿ.7 ರಲ್ಲಿ ಛಾಯಾಚಿತ್ರದಲ್ಲ್ ಸಾಕ್ಷಿ ಮು.ಮಾ1 ನ್ನು ನೋಡಿ ಗುರುತಿಸಿರುತ್ತಾರೆ. ಎಂದು ನುಡಿದಿರುತ್ತಾರೆ ಇದಕ್ಕೆ ನಿಮ್ಮ ಹೇಳಿಕೆ ಏನು?

ಉತ್ತರಃ 4.

ಪ್ರಶ್ನೆಃ 18. ಪ್ರಾಸಾ 8: ಚಂದ್ರಶೇಖರ ಹೊಳ್ಳ ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ತಾನು 2013-14 ನೇ ಇಸವಿಯಲ್ಲಿ ಕೆಲಸದ ನಿಮಿತ್ತ ಸಾಸ್ತಾನ ಕೋ ಆಪರೇಟಿವ್ ಸೊಸೈಟಿಗೆ ಹೋಗಿದ್ದಾಗ ಅಲ್ಲಿ ಪೊಲೀಸರು ಬಂದು ಸದ್ರಿ ಬ್ಯಾಂಕಿನಲ್ಲಿ ಸೇರಿಗಾರ್ ಎಂಬುವವರು ಅಡಿವಿಟ್ಟಿದ್ದ ಚಿನ್ನಮ್ನ ವಶಕ್ಕೆ ಪಡೆದುಕೊಳ್ಳುತ್ತೇವೆ ಎಂದು ಈಗ ತೋರಿಸಿದ ನಿಪಿ9 ಕ್ಕೆ ತನ್ನಿಂದ ಸಹಿಯನ್ನು ಪಡೆದುಕೊಂಡಿದ್ದು. ಸದ್ರಿ ದಾಖಲೆಯಲ್ಲಿ ಏನುಜ ಬರೆದಿದೆ ಎಂದು ಗೊತ್ತಿಲ್ಲ. ನಿಪಿ9 ರಲ್ಲ್ ತನ್ನ ಸಹಿಯನ್ನು ನಿಪಿ9(ಬಿ) ಎಂದು ಗುರುತಿಸಲಾಯಿತು. ತಾನು 2 ಮತ್ತು 4 ನೇ ಆರೋಪಿಯನ್ನು ಸೊಸೈಟಿಯಲ್ಲಿ ನೋಡಿದ್ದು. ಸದ್ರಿ ಅಭರಣಗಳನ್ನು ತನ್ನ ಸಮಕ್ಷಮ ಸರಾಫರನ್ನು ಕರೆಸಿ ತಾೂಕ ಮಾಡಿಸಿದ್ದು ಅದರ ಮೌಲ್ಯ ಎಷ್ಟು ಎಂದು ತನಗೆ ಗೊತ್ತಿಲ್ಲ. ಚಾಸಾ9 ಮತ್ತು 11 ರವರು ಹಾಜರಿದ್ದರು. ತಾನು ದಾಖಲೆಗೆ ರುಜು ಮಾಡುವ ಪೂರ್ವದಲ್ಲಿ ತನಗೆ ಪೊಲೀಸರು ಓದಿ ಹೇಳಿದ್ದು. ತಾನು 2 ಮತ್ತು 4 ನೇ ಆರೋಪಿಗಳನ್ನು ನೋಡಿದರೆ ಗುರುತಿಸುತ್ತೇನೆ _ಎಂದು ನುಡಿದಿರುತ್ತಾರೆ ಇದಕ್ಕೆ ನಿಮ್ಮ ಹೇಳಿಕೆ ಏನು?

ಉತ್ತರಃ 4.

ಪ್ರಶ್ನೆಃ 19. ಪ್ರಾಸಾ 10: ರಮೇಶ ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ಸ್ವತ್ತು ಸ್ವಾಧೀನತಾ ಮಹಜರನ್ನು ನಿಪಿ-11 ಎಂದು

ಅದರಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ-11(ಬಿ) ಎಂದು ಗುರುತಿಸಲಾಯಿತು. ಸದ್ರಿ ಸಹಿಯನ್ನು ದಿಃ 11-01-2013 ರಂದು ಸಾಸ್ತಾನ ಮೂರ್ತೆದಾರರ ಸೇವಾ ಸಹಕಾರಿ ಸಂಘದಲ್ಲಿ ಮಾಡಿದ್ದು. ಆ ಸಮಯದಲ್ಲಿ ಚಾಸಾ-15 ಮತ್ತು 16ರವರು ಹಾಗೂ ಆರೋಪಿ ಪ್ರಹ್ಲಾದ್ ರವರು ಇದ್ದರು. ಪೊಲೀಸರು ಸದ್ರಿ ಸಂಘದಲ್ಲಿ ಆರೋಪಿ ಅಡವು ಇಟ್ಟ ಚಿನ್ನದ ಲಕ್ಷ್ಮೀ ಪೆಂಡೆಂಟ್ ನ್ನು ವಶಪಡಿಸಿಕೊಂಡಿದ್ದು. ಮಧ್ಯಾಹ್ನ 2-30 ೆರಿಂದ 3-15ರವರೆಗೆ ಪೊಲೀಸರು ಮಹಜರು ಮಾಡಿರುತ್ತಾರೆ. ಸಾಕ್ಷಿಗೆ ಸ್ವತ್ತು ಸ್ವಾಧೀನತಾ ಮಹಜರನ್ನು ನಿಪಿ-10 ಎಂದು ಗುರುತಿಸಲಾಗಿದ್ದು, ಅದರಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ-10(ಬಿ) ಎಂದು ಗುರುತಿಸಲಾಯಿತು. ಸದ್ರಿ ಸಹಿಯನ್ನು ದಿಃ 01-03-2013 ರಂದು ಸಾಸ್ತಾನ ಮೂರ್ತೆದಾರರ ಸೇವಾ ಸಹಕಾರಿ ಸಂಘದಲ್ಲಿ ಮಾಡಿರುತ್ತೇನೆ. ಆ ಸಮಯದಲ್ಲಿ ಚಾಸಾ-15 ಮತ್ತು 16ರವರು ಹಾಗೂ ಆರೋಪಿ ಅಭಿಷೇಕ್ ರವರು ಇದ್ದರು. ಪೊಲೀಸರು ಆರೋಪಿಯು ಅಡವು ಇಟ್ಟಿದ್ದ ರೋಪ್ ಚೈನನ್ನು ವಶಪಡಿಸಿಕೊಂಡಿರುತ್ತಾರೆ. ಮಧ್ಯಾಹ್ನ 1 ರಿಂದ 2 ಗಂಟೆಯವರೆಗೆ ಪೊಲೀಸರು ಮಹಜರು ಮಾಡಿದ್ದು. ಆರೋಪಿತರನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ 3 ನೇ ಅರೋಪಿಯನ್ನು ನೋಡಿ ಗುರುತಿಸಿರುತ್ತಾರೆ. ಎಂದು ನುಡಿದಿರುತ್ತಾರೆ ಇದಕ್ಕೆ ನಿಮ್ಮ ಹೇಳಿಕೆ ಏನು?

ಉತ್ತರಃ 4.

ಪ್ರಶ್ನೆಃ 20. ಪ್ರಾಸಾ 11: ದಿನೇಶ್ ಪೂಜಾರಿ ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ತಾನು ಮೂರ್ತೆದಾ ಸೇವಾ ಸಹಕಾರಿ ಸಂಘ ಸಾಸ್ತಾನ ಶಾಖೆಯಲ್ಲಿ ಮ್ಯಾನೇಜರ್ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ. ದಿ. 17.12.2012 ರಂದು ಪ್ರಹ್ಲಾದ್ ಪೂಜಾರಿಯವರು ತಮ್ಮ ಸಂಘಕ್ಕೆ ಬಂದು ತಾಯಿ ಕೊಟ್ಟ ಚಿನ್ನ ಎಂದು ಹೇಳಿ ಅಡ ಇಟ್ಟು 10,000/- ಾ ಲ ಪಡೆದುಕೊಂಡಿದ್ದು. ದಿ. 19.12.2012 ರಂದು ಪ್ರಹ್ಲಾದ್ ಪೂಜಾರಿ ಮತ್ತೆ ಬಂದು ಆದೇ ಚಿನ್ನದ ಮೇಲೆ 20,500/- ಸಾಲ ಪಡೆದಿದ್ದು. ದಿ. 26.12.2012 ರಂದು ಮತ್ತು ಬಯಿ ಅದೇ ಚಿನ್ನದ ಮೇಲೆ 26,000/- ಸಾಲ ಪಡೆದಿದ್ದು. ಪ್ರಹ್ಲಾದಂ್ ಪೂಜಾರಿಯವರ ತಾಯಿ ಚಿನ್ನ ಕಳುವು ಆಗಿರುವುದಾಗಿ ದೂರು ಕೊಟ್ಟ ನಂತರ ತಮಗೆ ಅದು ಕಳುವಿನ ಮಾಲು ಎಂದು ಗೊತ್ತಾಗಿದ್ದು. ಸಾಲದ ಬಾಬ್ತು ತಮ್ಮ ಸೊಸೈಟಿಗೆ ಯಾವುದೇ ಹಣ ಬಂದಿರುವುದಿಲ್ಲ ಎಂದು ನುಡಿದಿರುತ್ತಾರೆ ಇದಕ್ಕೆ ನಿಮ್ಮ ಹೇಳಿಕೆ ಏನು?

ಉತ್ತರಃ 4.

ಪ್ರಶ್ನೆಃ 21. ಪ್ರಾಸಾ 11: ದಿನೇಶ್ ಪೂಜಾರಿ ರವರು ಮುಂದುವರೆದು ದ್ಕಿ. 04.12.2012 ರಂದು ಅಭಿಷೇಕ್ ಶೆಟ್ಟಿಗಾರ್ ರವರು ಬಂದು ತಾಯಿಗೆ ಹುಷಾರು ಇಲ್ಲವೆಂದು ಲಕ್ಷ್ಮೀ ಪದಕವನ್ನು ತಮ್ಮ ಸಂಘದಲ್ ಅಡವಿಟ್ಟು 16,000/- ಸಾಲ ಪಡೆದಿದ್ದು. ಅದರ ಬಾಬ್ತು ಅವರು ಮನೆಯವರು ಹಣವನ್ನು ತಮಗೆ ಕೊಟ್ಟಿದ್ದು. ನಂತರ ಪೋಲಿಸರು ಪ್ರಹ್ಲಾದ್ ಪೂಜಾರಿ ಮತ್ತು ಅಭೀಷೇಕ್ ಶೆಟ್ಟಿಗಾರ್ ರವರನುನ ತಮ್ಮ ಸಂಘಕ್ಕೆ ಕರೆದುಕೊಂಡು ಬಂದು ಕೋಟೇಶ್ವರದ ಜಾತ್ರೆಯಲ್ಲಿ ಯಾವುದೋ ಮಹಿಳೆಯ ಕುತ್ತಿಗೆಯಿಂದ ಸರ ಕದ್ದಿರುವುದಾಗಿ ಹೇಳಿದ ನಂತರ ತಮಗೆ ಗೊತ್ತಾಗಿದ್ದು. ತಮ್ಮ ಬಳಿ ಲಕ್ಷ್ಮೀ ಪದಕ ಮಾತ್ರ ಅಡವು ಇಟ್ಟಿದ್ದರು. ನಂತರ ಪೊಲೀಸರು ತಮಂ ಸೊಸೈಟಿಯಲ್ಲಿ ಲಒಂದು ಪದಕ ಮತ್ತು ರೋಪ್ ಚೈನನ್ನು ತೂಕ ಮಾಡಿ ಮಹಜರು ಮಾಡಿ ವಶಪಡಿಸಿಕೊಡಿದ್ದು. ಬಾಂಡನ್ನು ಸಹ ಪೊಲೀಸರು ತೆಗೆದುಕೊಂಡು ಹೋಗಿದ್ದು. ಮೊದಲುಪ್ರಹ್ಲಾದ್ ಪೂಜಾರಿಯವರನುನ ಕರೆದುಕೊಂಡು ಬದಿದ್ದರು. ನಂತರ ಅಭೀಷಕ್ ಶೆಟ್ಟಿಗಾರ್ ರವರನ್ನು ಕರೆದುಕೊಂಡು ಬಂದಿದ್ದು. ಈ ಕುರಿತು ತಾಗನು ಪೊಲೀಸರಿಗೆ ಹೇಳಿಕೆ ನೀಡಿದ್ದು. ಮಹಜರು ಸಮಯದಲ್ಲಿ ಪೊಲೀಸರು ಚಿನ್ನದ ಪೋಟೋ ತೆಗೆದಿರುತ್ತಾರೆ ಎಂದು ನುಡಿದಿರುತ್ತಾರೆ ಇದಕ್ಕೆ ನಿಮ್ಮ ಹೇಳಿಕೆ ಏನು?

ಉತ್ತರಃ 4.

ಪ್ರಶ್ನೆಃ 22. ಪ್ರಾಸಾ 11: ದಿನೇಶ್ ಪೂಜಾರಿ ರವರು ಮುಂದುವರೆದು ದಿ. 01.03.2013 ರಂದು 3 ನೇ ಆರೋಪಿಯನ್ನು ಪೊಲೀಸರು ತಮ್ಮ ಕಚೇರಿಗೆ ಕರೆ ತಂದಿದ್ದು ತಮ್ಮ ಸಿಬ್ಬಂದಿಯವರಾದ ಚಾಸಾ13 ಮತ್ತು 14 ರವರ ಸಮಕ್ಷಮ 3 ನೇ ಆರೋಪಿ ಕಳ್ಳತನ ಮಾಡಿ ತಮ್ಮ ಸೊಸೈಟಿಯಲ್ಲಿ ಅಡಮಾನ ಮಾಡಿರುವುದಾಗಿ ಪೊಲೀಸರು ತಿಳಿಸಿದ್ದು ಅದರು ಲಕ್ಷ್ಮೀ ಪೆಂಡೆಂಟ್ ಆಗಿದ್ದು ಕೆಳಗೆ 6 ಮುತ್ತು ಇದ್ದು ಅದನ್ನು ಚಾಸಾ16 ರವರು ತೂಕ ಮಾಡಿದಾಗ 8.700 ಗ್ರಾಂಗಳು ಇರುವುದುಕಂಡು ಬಂದಿದ್ದು. ಆಗ 3 ನೇ ಆರೋಪಿ ಇರಿಸಿದ್ದ ಬಾಂಡು, ರಶೀದಿ ಮತ್ತು ಸದ್ರಿ ಆಭರಣವನ್ನು ದಾಖಲಾತಿ

ಆಭರಣವನ್ನು ದಾಖಲಾತಿಗಳೊಂದಿಗೆ ವಶಕ್ಕೆ ಪಡೆದಿದ್ದು. ಸದ್ರಿ ಪಂಚನಾಮೆಯನ್ನು ಮಧ್ಯಾಹ್ನ 12 ರಿಂದ 1 ಗಂಟೆಯವರೆಗೂ ಜರುಗಿಸಿರುತ್ತಾರೆ ಎಂದು ನುಡಿದಿರುತ್ತಾರೆ ಇದಕ್ಕೆ ನಿಮ್ಮ ಹೇಳಿಕೆ ಏನು?

ಉತ್ತರಃ 4.

ಪ್ರಶ್ನೆಃ 23. ಪ್ರಾಸಾ 11: ದಿನೇಶ್ ಪೂಜಾರಿ ರವರು ಮುಂದುವರೆದು ದಿಃ 11-01-2013 ರಂದು 1ನೇ ಆರೋಪಿಯನ್ನು ಪೊಲೀಸರು ತಮ್ಮ ಕಚೇರಿಗೆ ಕರೆ ತಂದಿದ್ದು, ತಮ್ಮ ಸಿಬ್ಬಂದಿಯವರಾದ ಚಾಸಾ-13 ಮತ್ತು 14 ರವರ ಸಮಕ್ಷಮ 1ನೇ ಆರೋಪಿ ತನ್ನದೇ ಮನೆಯಿಂದ ಕಳ್ಳತನ ಮಾಡಿ ತಮ್ಮ ಸೊಸೈಟಿಯಲ್ಲಿ ಅಡಮಾನ ಮಾಡಿರುವುದಾಗಿ ಪೊಲೀಸರು ತಿಳಿಸಿದ್ದು ಅದು ಚಿನ್ನದ ಸರ ಆಗಿದ್ದು, ಅದನ್ನು ಚಾಸಾ-16 ರವರು ತೂಕ ಮಾಡಿದಾಗ 12.50 ಗ್ರಾಂಗಳು ಇರುವುದು ಕಂಡು ಬಂದಿದ್ದು, ಆಗ 1ನೇ ಆರೋಪಿ ಇರಿಸಿದ್ದ ಬಾಂಡು, ರಶೀದಿ ಮತ್ತು ಸದ್ರಿ ಆಭರಣವನ್ನು ದಾಖಲಾತಿಗಳೊಂದಿಗೆ ವಶಕ್ಕೆ ಪಡೆದಿರುತ್ತಾರೆ. ಸದ್ರಿ ಪಂಚನಾಮೆಯನ್ನು ಮಧ್ಯಾಹ್ನ 2-30 ರಿಂದ 3-15 ಗಂಟೆಯವರೆಗೂ ಜರುಗಿಸಿರುತ್ತಾರೆ. ಈ ಕುರಿತಾಗಿ ನಾನು ಪೊಲೀಸರಿಗೆ ಹೇಳಿಕೆ ನೀಡಿರುತ್ತೇನೆ. ಸಾಕ್ಷಿ ನ್ಯಾಯಾಲಯದ ಮುಂದೆ ಇರುವ 3ನೇ ಆರೋಪಿಯನ್ನು ನೋಡಿ ಗುರುತಿಸಿದ್ದು. 1 ನೇ ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ಬಾಂಡು ಮತ್ತು ರಶೀದಿಯನ್ನು ನೋಡಿ ಗುರುತಿಸಿದ್ದು ಅವುಗಳ ದೃಢೀಕೃತ ನಕಲುಗಳನ್ನು ಮಾತ್ರ ಕಡತದೊಂದಿಗೆ ಹಾಜರುಪಡಿಸಿದ್ದು ಮೂಲ ಪ್ರತಿಗಳನ್ನು ಹಾಜರುಪಡಿಸದೆ ಇದ್ದ ಕಾರಣ ದಾಖಲಾತಿಗಳನ್ನು ನಿಶಾನೆಯಾಗಿ ಗುರುತಿಸಿಲ್ಲ. ಸದ್ರಿ ಆಭರಣಗಳನ್ನು ನೋಡಿದರೆ ಗುರುತಿಸುತ್ತೇನೆ ಎಂದು ನುಡಿದಿರುತ್ತಾರೆ ಇದಕ್ಕೆ ನಿಮ್ಮ ಹೇಳಿಕೆ ಏನು?

ಉತ್ತರಃ 4.

ಪ್ರಶ್ನೆಃ 24. ಪ್ರಾಸಾ 13: ಡಾ. ಎಚ್ ದಿನಕರ ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ದಿಃ 28-11-2012 ರಂದು ಮಧ್ಯಾಹ್ನ 1 ಗಂಟೆಗೆ ಪ್ರಾಸಾ-1ರವರು ಕುಂದಾಪುರ ಠಾಣೆಯ ಮಹಿಳೆಯ ಪೇದೆ 2250ರವರೊಂದಿಗೆ ದಿಃ 28-11-2012ರ ಮಧ್ಯಾಹ್ನ 0.015 ಗಂಟೆಗೆ ಸರಗಳ್ಳತನ ಹಿನ್ನೆಲೆ ಗಾಯಗಳಿಗೆ ಒಳಗಾಗಿದ್ದು ಆಕೆಯನ್ನು ಪರೀಕ್ಷಿಸಿದಾಗ ಕಣ್ಣಿಗೆ ಕಾಣುವಂತಹ ಗಾಯಗಳು ಕಂಡು ಬಂದಿರುವುದಿಲ್ಲ. ಕುತ್ತಿಗೆಯ ಭಾಗದಲ್ಲಿ ನೋವು ಇರುವುದಾಗಿ ತಿಳಿಸಿರುತ್ತಾರೆ. ತನ್ನ ಅಭಿಪ್ರಾಯದಲ್ಲಿ ಮೇಲಿನ ಗಾಯಗಳು ಸಾಮಾನ್ಯ ಸ್ವರೂಪದ್ದಾಗಿದ್ದು ಈ ಕುರಿತು ತಾನು ಗಾಯದ ಪ್ರಮಾಣ ಪತ್ರವನ್ನು ನೀಡಿದ್ದು. ಸದ್ರಿ ದಾಖಲೆಯನ್ನು ನಿಪಿ-13 ಎಂದು, ಸಾಕ್ಷಿ ಸಹಿಯನ್ನು ನಿಪಿ-ನಿಪಿ-13(ಎ) ಎಂದು ಗುರುತಿಸಲಾಯಿತು. ಎಂದು ನುಡಿದಿರುತ್ತಾರೆ ಇದಕ್ಕೆ ನಿಮ್ಮ ಹೇಳಿಕೆ ಏನು?

ಉತ್ತರಃ 4.

ಪ್ರಶ್ನೆಃ 25. ಪ್ರಾಸಾ 14: ಮಹಾಬಲ ಶೆಟ್ಟಿ ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ದಿಃ 2811/2012 ರಂದು ತಾನು ಠಾಣಾ ಪ್ರಭಾರದಲ್ಲಿದ್ದಾಗ ಬೆಳಿಗ್ಗೆ 10-30 ಗಂಟೆ ಸಮಯಕ್ಕೆ ಚಾಸಾ-1ರವರು ಠಾಣೆಗೆ ಹಾಜರಾಗಿ ನೀಡಿದ ಲಿಖಿತ ದೂರನ್ನು ಪಡೆದು ಠಾಣಾ ಅಪರಾಧ ಕ್ರಮಾಂಕ 325/2012 ರಂತೆ ಪ್ರಕರಣವನ್ನು ದಾಖಲಿಸಿ ಪ್ರ.ವ.ವರದಿಯನ್ನು ತಯಾರಿಸಿ ಮಾನ್ಯ ನ್ಯಾಯಾಲಯಕ್ಕೂ ಮತ್ತು ಮೇಲಾಧಿಕಾರಿಯವರಿಗೆ ನಿವೇದಿಸಿಕೊಂಡಿದ್ದು. ಚಾಸಾ-1 ರವರ ವೈದ್ಯಕೀಯ ಚಿಕಿತ್ಸೆ ಬಗ್ಗೆ ಡಬ್ಲೂಪಿಸಿ 2250ರವರನ್ನು ಕೋರಿಕೆ ಪತ್ರದೊಂದಿಗೆ ಕಳುಹಿಸಿರುತ್ತೇನೆ. ಸದ್ರಿ ದೂರನ್ನು ಈಗಾಗಲೇ ನಿಪಿ-1 ಎಂದು ಅದರಲ್ಲಿನ ಸಹಿಯನ್ನು ನಿಪಿ-1(ಬಿ) ಎಂದು ಗುರುತಿಸಲಾಯಿತು. ಪ್ರ.ವ.ವರದಿಯನ್ನು ನಿಪಿ-14 ಎಂದು, ಅದರಲ್ಲಿನ ಸಹಿಯನ್ನು ನಿಪಿ-14(ಎ) ಎಂದು ಗುರುತಿಸಲಾಯಿತು. ನಂತರ ಪ್ರಕರಣದ ಕಡತವನ್ನು ಮುಂದಿನ ತನಿಖೆಗಾಗಿ ಚಾಸಾ-30 ರವರಿಗೆ ಹಸ್ತಾಂತರಿಸಿರುತ್ತೇನೆ ಎಂದು ನುಡಿದಿರುತ್ತಾರೆ ಇದಕ್ಕೆ ನಿಮ್ಮ ಹೇಳಿಕೆ ಏನು?

ಉತ್ತರಃ 4.

ಪ್ರಶ್ನೆಃ 26. ಪ್ರಾಸಾ 15: ಶ್ರೀಮತಿ ರೇವತಿ ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ದಿಃ09.01.2013 ರಂದು ಬೆಳಿಗ್ಗೆ 6 ಗಂಟೆ ಸಮಯದಲ್ಲಿ ಸಿಬ್ಬಂದಿಯವರೊಂದಿಗೆ ಕುಂದಾಪುರದ ಶಾಸ್ತ್ರಿ ಪಾರ್ಕ್ ಬಳಿ ಗಸ್ತಿನಲ್ಲಿದ್ದಾಗ ಒಬ್ಬ ವ್ಯಕ್ತಿಯು ಸಂಶಯಾಸ್ಪದವಾಗಿ ಕಂಡು ಬಂದಿದ್ದರಿಂದ ಆತನನ್ನು ವಿಚಾರಿಸಲಾಗಿ, ಈ ಪ್ರಕರಣದಲ್ಲಿ ಒಳಗೊಂಡ ಬಗ್ಗೆ ಸಂಶಯ ಬಂದಿದ ಮೇರೆಗೆ ಪಂಚರಾದ ಚಾಸಾ.7 ಮತ್ತು 8 ರವರ ಸಮಕ್ಷಮದಲ್ಲಿ ಸಿಬ್ಬಂದಿಯವರಾದ ಚಾಸಾ.27 ರವರ ಮೂಲಕ ಬರಮಾಡಿಕೊಂಡು ಆರೋಪಿಯನ್ನು ದಸ್ತಗಿರಿ ಪಂಚನಾಮೆ ಜರುಗಿಸುವ ಮೂಲಕ 6.15 ರಿಂದ 6.30 ರವರೆಗೂ ವಶಕ್ಕೆ

ಪಡೆದು, ಆತನನ್ನು ಪ್ರಶ್ನಿಸಲಾಗಿ, ಆತನು ತನ್ನ ಹೆಸರು ಪ್ರಶಾಂತ್ ಶೇರಿಗಾರ್ ಎಂದು ತಿಳಿಸಿದ್ದು, ಆತ ಆ ವೇಳೆಯಲ್ಲಿ ತನ್ನ ತಪ್ಪೊಪ್ಪಿ ಗೆ ಹೇಳಿಕೆಯನ್ನು ನೀಡಿರುತ್ತಾನೆ. ಆತನ ಸ್ವಇಚ್ಛಾ ಹೇಳಿಕೆಯಲ್ಲಿ ತಿಳಿಸಿದಂತೆ ಇಲಾಖಾ ವಾಹನದಲ್ಲಿ ಅವನು ಕರೆದುಕೊಂಡು ಹೋದ ಸ್ಥಳದಲ್ಲಿ ಪಂಚರಾದ ಚಾಸ.9 ಮತ್ತು 10ರವರ ಸಮಕ್ಷಮ ಉಡುಪಿ ತಾಲೂಕಿನ ಪಾಂಡೇಶ್ವರ ಗ್ರಾಮ ಸಾಸ್ತಾನ ಕೋ-ಆಪ್. ಸೊಟೈಟಿ ಇಲ್ಲಿಗೆ ತೆರಳಿದ್ದು, ಅಲ್ಲಿಗೆ ಆರೋಪಿ ತಾಯಿ ಪ್ರೇಮಾ ಶೇರಿಗಾರ್-4ನೇ ಆರೋಪಿಯನ್ನು ಕರೆಯಿಸಿದ್ದು, 2ನೇ ಆರೋಪಿಯು ಆತನ ತಾಯಿ 4ನೇ ಆರೋಪಿಯೊಂದಿಗೆ ಸೇರಿ ಸದ್ರಿ ಸಂಸ್ಥೆಯಲ್ಲಿ ಅಡವಿರಿಸಿದ್ದ 2 ಎಳೆಯ ದಳಪತಿ ಕರಿಮಣಿ ಸರವನ್ನು ಸೊಸೈಟಿಯ ಮ್ಯಾನೇಜರ್ ಆದ ಚಾಸಾ.12ರವರು ಹಾಜರುಪಡಿಸಿದ್ದನ್ನು ಚಾಸಾ.11ರವರ ಮೂಲಕ ತೂಕ ಮಾಡಿಸಿದ್ದು, ಅದು 36.600 ಗ್ರಾಂ. ಆಗಿರುತ್ತದೆ. ಅದನ್ನು ಪಂಚರ ಮೂಲಕ ವಶಕ್ಕೆ ಪಡೆಯಲಾಯಿತು. ಅಡಮಾನ ಇರಿಸಲು ಉಪಯೋಗಿಸಿದ ಚೀಟಿ ಮತ್ತು ಬಾಂಡನ್ನು ವಶಕ್ಕೆ ಪಡೆದಿರುತ್ತೇವೆ. ಸದ್ರಿ ಪಂಚನಾಮೆಯನ್ನು 1 ರಿಂದ 2 ಗಂಟೆಯ ಅವಧಿಯಲ್ಲಿ ಜರುಗಿಸಿರುತ್ತೇವೆ. ನಂತರ ವಶಕ್ಕೆ ಪಡೆದ ಸ್ವತ್ತನ್ನು ಪಟ್ಟಿಯಲ್ಲಿ ಅಳವಡಿಸಿರುತ್ತೇನೆ ಎಂದು ನುಡಿದಿರುತ್ತಾರೆ ಇದಕ್ಕೆ ನಿಮ್ಮ ಹೇಳಿಕೆ ಏನು?

ಉತ್ತರಃ 4.

ಪ್ರಶ್ನೆಃ 27. ಪ್ರಾಸಾ 15: ಶ್ರೀಮತಿ ರೇವತಿ ರವರು ಮುಂದುವರೆದು ಅದೇ ದಿನ ಸಾಕ್ಷಿದಾರರಾದ ಚಾಸಾ.12 ರವರ ಹೇಳಿಕೆಯನ್ನು ಪಡೆದಿರುತ್ತೇನೆ. ಈ ಪ್ರಕರಣವನ್ನು ಚಾಸ.30ರವರು ಬೇರೆ ಪ್ರಕರಣದಲ್ಲಿ ತನಿಖಾ ಕ್ರಮದಲ್ಲಿದ್ದ ಕಾರಣ ಅವರ ಮೌಖಿಕ ಆದೇಶದ ಮೇರೆಗೆ ತನಿಖೆ ಕೈಗೊಂಡಿರುತ್ತೇನೆ. ದಿನಾಂಕ 10.01.2013 ರಂದು ತನಿಖೆಯನ್ನು ಮುಂದುವರಿಸಿ, ರಾತ್ರಿ 11.30 ಗಂಟೆಗೆ 1ನೇ ಆರೋಪಿಯನ್ನು ಸಾಲಿಗ್ರಾಮದ ಬಸ್ಸ್ ನಿಲ್ದಾಣದ ಬಳಿ ಚಾಸಾ.22ರವರ ಸಹಾಯದಿಂದ ದಸ್ತಗಿರಿ ಮಾಡಿರುತ್ತೇನೆ. ನಂತರ ಆತನನ್ನು ಠಾಣೆಗೆ ಕರೆತಂದು, ಠಾಣೆಯಲ್ಲಿ ಪಂಚರಾದ ಚಾಸಾ.20 ಮತ್ತು 21 ರವರ ಸಮಕ್ಷಮ ದಿನಾಂಕ 11.01.2013 ರಂದು 1ನೇ ಆರೋಪಿಯನ್ನು ದಸ್ತಗಿರಿ ಮಾಡಿ ಆತನ ಕಿಸೆಯಲ್ಲಿದ್ದ ಚಿನ್ನದ ಗುಂಡಿನಂತೆ ಕಾಣುವ ಆತನು ತಪ್ಪೊಪ್ಪಿಗೆಯ ಮೇರೆಗೆ ಅದನ್ನು ವಶಕ್ಕೆ ಪಡೆದಿರುತ್ತೇನೆ. ಅದರ ಅಂದಾಜು 1 ಗ್ರಾಂ. ತೂಕ ಇತ್ತು. ತಾನು ಒಂದು ಮನೆಯಲ್ಲಿ ಕಳವು ಮಾಡಿದ ಚಿನ್ನದ ಸರ ಬ್ಯಾಂಕಿನಲ್ಲಿಟ್ಟ ಚೀಟಿಯನ್ನು ಹಾಜರುಪಡಿಸಿದ್ದು, ಅದನ್ನು ಸಹ ರಾತ್ರಿ 1 ರಿಂದ 2 ಗಂಟೆಯವರೆಗೂ ಪಂಚನಾಮೆ ಜರುಗಿಸಿ ಸ್ವತ್ತನ್ನು ಪಟ್ಟಿಯಲ್ಲಿ ಅಳವಡಿಸಿದ್ದು. ಆತನ ತಪ್ಪೊಪ್ಪಿಗೆ ಹೇಳಿಕೆಯನ್ನು ದಾಖಲಿಸಿಕೊಂಡಿರುತ್ತೇನೆ. ಎಂದು ನುಡಿದಿರುತ್ತಾರೆ ಇದಕ್ಕೆ ನಿಮ್ಮ ಹೇಳಿಕೆ ಏನು?

ಉತ್ತರಃ 4.

ಪ್ರಶ್ನೆಃ 28. ಪ್ರಾಸಾ 15: ಶ್ರೀಮತಿ ರೇವತಿ ರವರು ಮುಂದುವರೆದು ಆತನ ತಪ್ಪೊಪ್ಪಿಗೆ ಮೇರೆಗೆ ಕರೆದುಕೊಂಡು ಹೋದ ಉಡುಪಿ ತಾಲೂಕಿನ ಶಿವಳ್ಳಿ ಗ್ರಾಮದ ಕನಕದಾಸ ರಸ್ತೆಯಲ್ಲಿರುವ ರೂಪಾ ಜ್ಯುವೆಲ್ಲರಿಯಲ್ಲಿ ಆತನು ಮಾರಾಟ ಮಾಡಿರುವುದಾಗಿ ಹೇಳಿದ್ದು, ಅಂಗಡಿಯ ಮಾಲೀಕರಾದ ಸಚಿನ್ ಶೇಟ್ ರವರಲ್ಲಿ ವಿಷಯ ತಿಳಿಸಿ, ಸದ್ರಿಯವರು ಹಾಜರುಪಡಿಸಿದ ಸುಮಾರು ಮೂರುವರೆ ಇಂಚು ಉದ್ದ ಇರುವ ಬಂಗಾರದ 1.110 ಗ್ರಾಂ. ತೂಕ ಇದ್ದು, ಅದನ್ನು ಪಂಚರಾದ ಚಾಸಾ.17 ಮತ್ತು 18ರವರ ಸಮಕ್ಷಮ ಪಂಚನಾಮೆ ಮೂಲಕ 12 ರಿಂದ 12.30ರವರೆಗೂ ಸ್ವಾಧೀನಪಡಿಸಿಕೊಂಡು ಸ್ವತ್ತುಪಟ್ಟಿಯಲ್ಲಿ ಅಳವಡಿಸಿಕೊಂಡಿರುತ್ತೇನೆ ಎಂದು ನುಡಿದಿರುತ್ತಾರೆ ಇದಕ್ಕೆ ನಿಮ್ಮ ಹೇಳಿಕೆ ಏನು?

ಉತ್ತರಃ 4.

ಪ್ರಶ್ನೆಃ 29. ಪ್ರಾಸಾ 15: ಶ್ರೀಮತಿ ರೇವತಿ ರವರು ಮುಂದುವರೆದು ಅದೇ ದಿನ ಆರೋಪಿಯು ನೀಡಿದ ಸ್ವಇಚ್ಛಾ ಹೇಳಿಕೆ ಮೇರೆಗೆ ಆತನು ಸಮಾರು 1 ತಿಂಗಳ ಹಿಂದೆ ಯಾವುದೋ ಮನೆಯಿಂದ ಕಳವು ಮಾಡಿದ ಚಿನ್ನದ ಚೈನ್ ನ್ನು ಸಾಸ್ತಾನದ ಮೂರ್ತೆದಾರರ ಸೇವಾ ಸಹಕಾರಿ ಸಂಘದಲ್ಲಿ ಅಡಮಾನ ಇರಿಸಿದ್ದು, ಚಾಸಾ.15ರವರು ಹಾಜರುಪಡಿಸಿದ ಚಾಸಾ.16ರವರಿಂದ ತೂಕ ಮಾಡಿಸಿ ಪಂಚರಾದ ಚಾಸಾ.13 ಮತ್ತು 14 ರವರ ಸಮಕ್ಷಮ ಸುಮಾರು 12.500 ಗ್ರಾಂ. ತೂಕದ ರೋಪ್ ಚೈನ್ ನ್ನು, ಬಾಂಡ್, ಚೀಟಿಯನ್ನು ಪಂಚನಾಮೆ ಮೂಲಕ ವಶಕ್ಕೆ ಪಡೆದುಕೊಳ್ಳಲಾಯಿತು. ಸದ್ರಿ ಪಂಚನಾಮೆಯನ್ನು ಮಧ್ಯಾಹ್ನ 2.30 ರಿಂದ 3 ಗಂಟೆಯವರೆಗೂ ಜರುಗಿಸಿ ಸ್ವತ್ತುಪಟ್ಟಿಯಲ್ಲಿ ಅಳವಡಿಸಿರುತ್ತೇನೆ. ಎಂದು ನುಡಿದಿರುತ್ತಾರೆ ಇದಕ್ಕೆ ನಿಮ್ಮ ಹೇಳಿಕೆ ಏನು?

ಉತ್ತರಃ 4.

ಪ್ರಶ್ನೆಃ 30. ಪ್ರಾಸಾ 15: ಶ್ರೀಮತಿ ರೇವತಿ ರವರು ಮುಂದುವರೆದು 1ನೇ ಆರೋಪಿ ಸ್ವಇಚ್ಛೆಯಲ್ಲಿ ತಿಳಿಸಿದಂತೆ ಪಂಚರಾದ ಚಾಸಾ.17 ಮತ್ತು 22 ರವರ ಸಮಕ್ಷಮ ಮುತ್ತೂಟ್ ಫಿನ್ ಕಾರ್ಟ್ ಫೈನಾನ್ಸ ಗೆ ಕರೆದುಕೊಂಡು ಹೋದಂತೆ ಚಾಸ.22 ರವರು ಹಾಜರುಪಡಿಸಿದ ಹವಳದ ಸರ ಸುಮಾರು 20.500 ಗ್ರಾಂ, ತೂಕ ಇದ್ದು, ಅದನ್ನು ಸಂಜೆ 4 ರಿಂದ 4.45 ಗಂಟೆಯ ಅವಧಿಯಲ್ಲಿ ವಶಕ್ಕೆ ಪಡೆದು ಸ್ವತ್ತುಪಟ್ಟಿಯಲ್ಲಿ ಅಳವಡಿಸಿಕೊಂಡಿರುತ್ತೇನೆ. ಅದೇ ದಿನ ಸಾಕ್ಷಿದಾರರ ಹೇಳಿಕೆಗಳನ್ನು ಪಡೆದಿರುತ್ತೇನೆ. 1ನೇ ಆರೋಪಿಯ ಸ್ವಇಚ್ಛಾ ಹೇಳಿಕೆಯ ಆಧಾರದ ಮೇರೆಗೆ ಆತನು 3ನೇ ಆರೋಪಿ ಮೂಲಕ ಅಡಮಾನವಿಟ್ಟ ಬಂಗಾರವನ್ನು ಮೂರ್ತೆದಾರರ ಸಹಕಾರಿ ಸಂಘ, ಕೋಟ ಇಲ್ಲಿ ಬಿಡುಗಡೆ ಮಾಡಬಾರದು ಎಂದು ಪತ್ರ ನೀಡಿರುತ್ತೇನೆ. ಎಂದು ನುಡಿದಿರುತ್ತಾರೆ ಇದಕ್ಕೆ ನಿಮ್ಮ ಹೇಳಿಕೆ ಏನು?

ಉತ್ತರಃ 4.

ಪ್ರಶ್ನೆಃ 31. ಪ್ರಾಸಾ 15: ಶ್ರೀಮತಿ ರೇವತಿ ರವರು ಮುಂದುವರೆದು 3ನೇ ಆರೋಪಿಯ ಪತ್ತೆ ಬಗ್ಗೆ ಸಾಸ್ತಾನಕ್ಕೆ ತೆರಳಿ ಮಾಹಿತಿ ಸಂಗ್ರಹಿಸಿ ಬೆಳಿಗ್ಗೆ 7 ಗಂಟೆಗೆ ಬಸ್ಸು ನಿಲ್ದಾಣದಲ್ಲಿ ಸಿಕ್ಕಿದ ಆತನನ್ನು ದಸ್ತಗಿರಿ ಮಾಡಿ, ಠಾಣೆಗೆ ಕರೆತಂದು ಆತನ ಸ್ವಇಚ್ಛಾ ಹೇಳಿಕೆಯನ್ನು ದಾಖಲಿಸಿಕೊಂಡು, ಚಾಸಾ.13 ಮತ್ತು 14 ರವರ ಸಮಕ್ಷಮ ಸಾಸ್ತಾನ ಮೂರ್ತೆದಾರರ ಸೇವಾ ಸಹಕಾರಿ ಸಂಘಕ್ಕೆ ಆರೋಪಿ ಕರೆದುಕೊಂಡು ಹೋಗಿದ್ದು, ಸದ್ರಿ ಸಂಸ್ಥೆಯ ಮ್ಯಾನೇಜರ್ ಚಾಸಾ.15ರವರು ಹಾಜರುಪಡಿಸಿದ ಲಕ್ಷ್ಮೀ ಪೆಂಡೆಂಟ್ ಹಾಗೂ 6 ಮುತ್ತುಗಳು ಇರುವ ಚಿನ್ನದ ಸರವನ್ನು ಚಾಸಾ.16ರವರ ಸಮಕ್ಷಮ ತೂಕ ಮಾಡಿಸಿದ್ದು, ಅದು 8.700 ಗ್ರಾಂ. ಇದ್ದು, ಅದನ್ನು 12 ರಿಂದ 1 ಗಂಟೆಯವರೆಗೂ ಪಂಚನಾಮೆ ಮೂಲಕ ವಶಕ್ಕೆ ಪಡೆದು ಸ್ವತ್ತುಪಟ್ಟಿಯಲ್ಲಿ ಅಳವಡಿಸಿಕೊಂಡಿದ್ದು. ಅದೇ ದಿನ ಚಾಸಾ.15ರವರ ಹೇಳಿಕೆಯನ್ನು ದಾಖಲಿಸಿಕೊಂಡಿರುತ್ತೇನೆ. ಪ್ರಕರಣದ ಮುಂದಿನ ತನಿಖೆಯನ್ನು ಚಾಸಾ.30ರವರಿಗೆ ಹಸ್ತಾಂತರಿಸಿರುತ್ತೇನೆ. ಸಾಕ್ಷಿ ನ್ಯಾಯಾಲಯದ ಮುಂದಿರುವ 4ನೇ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿಯು ದಿಃ11.01.2013 ರ ಎರಡು ಸ್ವತ್ತು ಸ್ವಾ ಧೀನತಾ ಪಂಚನಾಮೆಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಕ್ರಮವಾಗಿ ನಿಪಿ-15 ಮತ್ತು 16 ಎಂದು ಗುರುತಿಸಲಾಯಿತು. ಎಂದು ನುಡಿದಿರುತ್ತಾರೆ ಇದಕ್ಕೆ ನಿಮ್ಮ ಹೇಳಿಕೆ ಏನು?

ಉತ್ತರಃ

ಪ್ರಶ್ನೆಃ 32. ನಿಮಗೆ ಹೆಚ್ಚಿಗೆ ಹೇಳುವುದು ಏನಾದರೂ ಇದೆಯಾ?

ಉತ್ತರಃ

ಪ್ರಶ್ನೆಃ 33: ನಿಮ್ಮ ಪರವಾಗಿ ಸಾಕ್ಷಿಗಳಿದ್ದಾರ?

ಉತ್ತರಃ

ಮೇಲ್ಕಂಡ ಹೇಳಿಕೆಯನ್ನು ಆರೋಪಿ ನುಡಿದ ಶಬ್ದಗಳಲ್ಲಿಯೇ ದಾಖಲಿಸಿದ್ದು ಅದು ನಿಜ ಹಾಗೂ ಸತ್ಯಾಂಶಗಳಿಂದ ಕೂಡಿರುವುದಾಗಿ ಪ್ರಮಾಣೀಕರಿಸಿದೆ.

ದಿ.06.03.2026.

1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾ.ದಂ., ಕುಂದಾಪುರ.